**ಪಾಠ–12** **ಸೆಪ್ಟೆಂಬರ್ 11–17**

# ವಿರಾಮವಿಲ್ಲದ ಪ್ರವಾದಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೋನ 1 ರಿಂದ 4 ಅಧ್ಯಾಯಗಳು, ಯೆರೆ 25:5, ಯೆಹೆ 14:6, ಪ್ರಕ 2:5, ಲೂಕ 9:51, ಯೂದ 1–25.

**ಸ್ಮರಣವಾಕ್ಯ : "ಇಂಥಾ ಗಿಡಕ್ಕಾಗಿ ನೀನು ಕನಿಕರಪಟ್ಟಿರುವಲ್ಲಿ ಎಡಗೈ ಬಲಗೈ ತಿಳಿಯದ ಒಂದು ಲಕ್ಷ ಇಪ್ಪತ್ತು ಸಾವಿರ ನರಪ್ರಾಣಿಗಳೂ ಬಹುಪಶುಗಳೂ ಉಳ್ಳ ಆ ದೊಡ್ಡ ಪಟ್ಟಣವಾದ ನಿನವೆಗಾಗಿ ನಾನು ಕನಿಕರ ಪಡಬಾರದೋ ಅಂದನು".** (ಯೋನ 4:11).

ಯೋನನ ಕಥೆಯು ಸತ್ಯವೇದದಲ್ಲಿ ಬಹಳ ಆಸಕ್ತಿಕರವಾದವುಗಳಲ್ಲಿ ಒಂದಾಗಿದೆ. ಆತನು ದೇವರ ಪ್ರವಾದಿಯಾಗಿದ್ದನು, ದೇವರಿಂದ ಕರೆಯಲ್ಪಟ್ಟವನಾಗಿದ್ದನು, ಆದರೂ ಮತ್ತೇನು? ಅವನು ದೇವರ ಕರೆಗೆ ಓಗೊಡದೆ ದೇವರಿಂದ ದೂರ ಓಡಿ ಹೋದನು. ಅನಂತರ ದೇವರು ಅವನನ್ನು ಅಸಾಧಾರಣ ಘಟನೆಗಳಿಂದ ಮನವೊಲಿಸಿದಾಗ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡು ದೇವರಿಗೆ ವಿಧೇಯನಾದನು. ಆದರೆ ನಂತರ ಆತನು ಏನು ಮಾಡಿದನು? ಯಾವ ಜನರಿಗೆ ಸುವಾರ್ತೆ ಸಾರಿ ಸಾಕ್ಷಿಯಾಗುವುದಕ್ಕೆ ಕರೆಯಲ್ಪಟ್ಟನೋ ಆ ಜನರು ನಾಶವಾಗದೆ ಉಳಿದಾಗ ಅವರ ಮೇಲೆಯೇ ದೂರು ಹೇಳಿದನು!

ಈಗ, ಯೆಹೋವನೇ, ನನ್ನ ಪ್ರಾಣವನ್ನು ತೆಗೆ; ನಾನು ಬದುಕುವುದಕ್ಕಿಂತ ಸಾಯುವುದೇ ಲೇಸು ಎಂದು ದೇವರಿಗೆ ಮೊರೆಯಿಡುವುದು ಒಬ್ಬ ವ್ಯಕ್ತಿಯು

* ಈ ಪಾಠವನ್ನು ಸೆಪ್ಟೆಂಬರ್ 18ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಶಾಂತಿ ಸಮಾಧಾನವನ್ನು ಕಳೆದುಕೊಂಡುದಕ್ಕೆ ಎಂಥಾ ಉದಾಹರಣೆಯಾಗಿದೆ! (ಯೋನ 4:3).

ಸ್ವತಃ ಯೇಸುಕ್ರಿಸ್ತನೇ ಯೋನನ ಕಥೆಯನ್ನು ಕುರಿತು ಹೇಳುತ್ತಾನೆ; "ನ್ಯಾಯ ವಿಚಾರಣೆಯಲ್ಲಿ ನಿನವೆ ಪಟ್ಟಣದವರು ಈ ಸಂತತಿಯವರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು; ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರೆಡೆಗೆ ತಿರುಗಿಕೊಂಡರು; ಆದರೆ ಇಲ್ಲಿ ಯೋನನಿಗಿಂತ ಹೆಚ್ಚಿವನಿದ್ದಾನೆ (ಮತ್ತಾಯ 12:41). ಹೌದು! ಈತನು (ಕ್ರಿಸ್ತನು) ಯೋನನಿಗಿಂತ ಹೆಚ್ಚಿನವನು. ಹಾಗಿಲ್ಲದಿದ್ದರೆ ಈತನು ನಮಗೆ ರಕ್ಷಕನಾಗಿರಲಾರನು.

ಈ ವಾರ ನಾವು ಯೋನನ ಬಗ್ಗೆ ಗಮನ ಹರಿಸೋಣ. ಆತನ ಅಸಮಾಧಾನ ಮತ್ತು ಕಳವಳಕಾರಿ ಪರಿಸ್ಥಿತಿಯಿಂದ ಏನನ್ನು ಕಲಿಯಬಹುದು ನೋಡೋಣ.

**ಭಾನುವಾರ** **ಸೆಪ್ಟೆಂಬರ್ 12**

## ದೂರ ಓಡುವುದು

ಯೋನನು ವಿಸ್ಮಯ ಪಟ್ಟುಕೊಳ್ಳುವಂಥ, ಯಶಸ್ಸು ಹೊಂದಿದ ಸುವಾರ್ತಾ ಸೇವಕನಾಗಿದ್ದನು. ಅದೇ ಸಮಯದಲ್ಲಿ ಆತನು ಆರಂಭದಲ್ಲಿ ಬಹಳ ಹಠಗಾರನಾಗಿದ್ದನು. ಯೋನನು ಏನೆಲ್ಲಾ ಮಾಡಿಕೊಂಡಿದ್ದನು. ಆದರೆ ದೇವರ ಕರೆಯು ಜೀವನದಲ್ಲಿ ದೊಡ್ಡ ರೀತಿಯ ಅಡಚಣೆ ತಂದಿತು. ಆತನು ದೇವರ ನೊಗವನ್ನು ತನ್ನ ಹೆಗಲಿಗೆ ತೆಗೆದುಕೊಂಡು ಅದು ಎಷ್ಟು ಮೃದುವಾದದ್ದು ಮತ್ತು ಹೊರೆಯು ಎಷ್ಟು ಹೌರವಾದದ್ದು ಎಂಬುದನ್ನು ಕಂಡುಕೊಳ್ಳದೆ (ಮತ್ತಾಯ 11:30). ದೇವರು ಹೇಳಿದ ಸ್ಥಳಕ್ಕೆ ಹೋಗದೆ ವಿರುದ್ಧ ದಿಕ್ಕಿನಲ್ಲಿ ಓಡುತ್ತಾ ತನ್ನ ವಿಶ್ರಾಂತಿಯನ್ನು ಕಂಡುಕೊಳ್ಳಲು ತೀರ್ಮಾನಿಸಿದನು.

ಯೋನನು ದೇವರಿಂದ ಕರೆಯಲ್ಪಟ್ಟು ತನ್ನ ವಿಶ್ರಾಂತಿ ಮತ್ತು ಸಮಾಧಾನವನ್ನು ಎಲ್ಲಿ ಕಂಡುಕೊಳ್ಳಲು ನಿರೀಕ್ಷಿಸಿದನು? ಅದು ಎಷ್ಟು ಚೆನ್ನಾಗಿ ನೆರವೇರಿತು? ಯೋನ 1ನೇ ಅಧ್ಯಾಯ ಓದಿರಿ.

ಯೋನನು ದೇವರು ಎಲ್ಲಿಗೆ ಹೋಗಬೇಕೆಂದು ಕರೆದನೋ ಅಲ್ಲಿಗೆ ಹೋಗದೆ ವಿರುದ್ಧ ದಿಕ್ಕಿಗೆ ಪ್ರಯಾಣ ಹೊರಟನು. ಆತನು ಸತ್ಯವೇದದಲ್ಲಿ ಬರುವ ಇತರೆ

ಪ್ರವಾದಿಗಳಂತೆ ದೇವರು ಕರೆದಾಗ ಪ್ರತಿವಾದ ಮಾಡುವುದಕ್ಕಾದರೂ ನಿಲ್ಲದೆ ಓಡತೊಡಗಿದನು (ಉದಾಹರಣೆಗೆ ವಿ.ಕಾಂಡ 4:13).

ಸಾಕಷ್ಟು ಆಸಕ್ತಿಕರವಾದುದೇನೆಂದರೆ, ಯೋನನು ದೇವರ ಪರವಾಗಿ ಕರೆಯಲ್ಪಟ್ಟದ್ದು ಇದೇ ಮೊದಲ ಸಲವಲ್ಲವೆಂದು 2 ಅರಸು 14:25ನೇ ವಚನವು ಸೂಚಿಸುತ್ತದೆ. ಆವಾಗ ಆತನು ದೇವರು ಹೇಳಿದುದನ್ನು ಮಾಡಿದನೆಂದು ಕಾಣುತ್ತದೆ. ಆದರೆ ಈ ಸಲ ಹಾಗೆ ಮಾಡಲಿಲ್ಲ. ಯಾಕೆ?

ಚಾರಿತ್ರಿಕ ಮತ್ತು ಪುರಾತತ್ವ ದಾಖಲೆಗಳು ಅಶ್ಶೂರರ ಕ್ರೂರತೆಯ ಬಗ್ಗೆ ಹೇಳುತ್ತವೆ. ಕ್ರಿಸ್ತ ಪೂರ್ವ 8ನೇ ಶತಮಾನದಲ್ಲಿ ಅವರು ಇಡೀ ಪೂರ್ವಾತ್ಯ ದೇಶಗಳ ಮೇಲೆ ತಮ್ಮ ಪ್ರಭುತ್ವವನ್ನು ಹೊಂದಿದ್ದರು. ಈ ಕಾಲದಲ್ಲೇ ಯೋನನು ಇಸ್ರಾಯೇಲ್ ದೇಶದಲ್ಲಿ ದೇವರ ಸೇವಕನಾಗಿದ್ದನು. ಸುಮಾರು ಎಪ್ಪತ್ತೈದು ವರ್ಷಗಳ ಬಳಿಕ ಅಶ್ಶೂರದ ಅರಸನಾದ ಸನ್ಹೇರಿಬನು ಯಹೂದವನ್ನು ಆಕ್ರಮಿಸಿಕೊಂಡನು. ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ಇಸ್ರಾಯೇಲ್ ಮತ್ತು ಸಮೇರಿಯವನ್ನು ಗೆದ್ದುಕೊಂಡಿದ್ದರು. ಆವಾಗ ಹಿಜ್ಕೀಯನು ಅಶ್ಶೂರ ಪ್ರಭುವಿನ ವಿರೋಧವಾಗಿ ಸ್ಥಳೀಯ ಅರಸರೊಂದಿಗೆ ಮೈತ್ರಿಕೂಟ ಮಾಡಿಕೊಂಡಿದ್ದನು. ಈವಾಗ ಅಶ್ಶೂರರು ಇದಕ್ಕೆ ಪ್ರತೀಕಾರ ಮಾಡುವ ಕಾಲ ಬಂದಿತು. ಸತ್ಯವೇದ (2 ಅರಸು 18, ಯೆಶಾಯ 36), ಅಶ್ಶೂರದ ಚಾರಿತ್ರಿಕ ದಾಖಲೆಗಳು, ನಿನವೆ ಪಟ್ಟಣದಲ್ಲಿದ್ದ ಸನ್ಹೇರಿಬನ ಅರಮನೆಯ ಗೋಡೆಯ ಚಿತ್ರಗಳು ಎಲ್ಲವೂ ಲಾಕೀಷ್ ಪಟ್ಟಣವು ಕ್ರೂರವಾಗಿ ನಾಶವಾದ ಕಥೆಯನ್ನು ಹೇಳುತ್ತವೆ. ಲಾಕೀಷ್ ಪಟ್ಟಣವು ಹಿಜ್ಕೀಯನ ರಾಜ್ಯದ ದಕ್ಷಿಣ ಭಾಗದಲ್ಲಿದ್ದ ಒಂದು ಪ್ರಧಾನವಾದ ಕೋಟೆಕೊತ್ತಲುಳ್ಳ ಪಟ್ಟಣವಾಗಿತ್ತು. ಒಂದು ಶಿಲಾಶಾಸನದ ಪ್ರಕಾರ ಸನ್ಹೇರಿಬನು ಸುಮಾರು 46 ಕೋಟೆಗಳುಳ್ಳ ಪಟ್ಟಣಗಳಿಂದ ಎರಡು ಲಕ್ಷ ಜನರನ್ನು ಸೆರೆಹಿಡಿದು ಕೊಂದು ಹಾಕಿದೆನೆಂದು ಹೇಳಿಕೊಳ್ಳುತ್ತಾನೆ. ಅಶ್ಶೂರ ಅರಸನು ಲಾಕೀಷ್ ಪಟ್ಟಣವನ್ನು ಆಕ್ರಮಿಸಿಕೊಂಡಾಗ ಸಾವಿರಾರು ಸೆರೆಯಾಳುಗಳನ್ನು ಶೂಲಕ್ಕೆ ಏರಿಸಿದನು, ಹಿಜ್ಕೀಯ ಅರಸನ ನಿಷ್ಠಾವಂತ ಬೆಂಬಲಿಗರನ್ನು ಜೀವಂತ ಚರ್ಮ ಸುಲಿಸಿದನು, ಉಳಿದವರನ್ನು ಅಶ್ಶೂರಕ್ಕೆ ಅಲ್ಪಬೆಲೆಯ ಗುಲಾಮರನ್ನಾಗಿ ಕಳುಹಿಸಿದನು. ಅಶ್ಶೂರ ಅರಸರು ಆಗಿನ ಕಾಲದಲ್ಲಿ ಲೋಕದಲ್ಲಿದ್ದ ಸಾಮಾನ್ಯ ಮಾನದಂಡಕ್ಕಿಂತಲೂ ನಂಬಲಾರದಷ್ಟು

ಹೆಚ್ಚು ಕ್ರೂರರಾಗಿದ್ದರು. ಅಂತಹ ಅರಸರ ಪಟ್ಟಣವಾದ ನಿನವೆಗೆ ದೇವರು ಯೋನನನ್ನು ಕಳುಹಿಸಿದನು.

ಆದುದರಿಂದ ಯೋನನು ನಿನೆವೆಗೆ ಹೋಗಲು ಹಿಂಜರಿದುದಕ್ಕೆ ಆಶ್ಚರ್ಯಪಡಬೇಕೇ? ದೇವರಿಂದ ತಪ್ಪಿಸಿಕೊಂಡು ಹೋಗುವುದೇ? ಹೀಗೆ ಯಾವಾಗಲಾದರೂ ನೀವು ಮಾಡಿರುವಿರಾ? ಹಾಗಾದರೆ ನಿಮಗೆ ಅದು ಎಷ್ಟು ಅನುಕೂಲ ಕೊಟ್ಟಿತು? ನೀವು ಇಂತಹ ತಪ್ಪಿನಿಂದ ಯಾವ ಪಾಠಗಳನ್ನು ಕಲಿತುಕೊಳ್ಳುವಿರಿ?

**ಸೋಮವಾರ** **ಸೆಪ್ಟೆಂಬರ್ 13**

## ಮೂರು ದಿನಗಳ ವಿಶ್ರಾಂತಿ

ಯೋನನು ದೇವರಿಂದ ಮಾರಕ್ಕೆ ಹೋಗಲು ಮಾಡಿದ ಪ್ರಯಾಣವು ಸಮಸ್ಯೆ ರಹಿತವಾಗಿರಲಿಲ್ಲ. ಆತನ ಅಲ್ಪಾವಧಿಯ ವಿಶ್ರಾಂತಿಗೆ ದೇವರು ಮಾಡಿದ ಅದ್ಭುತಕರವಾದ ಅಡಚಣೆ–ಬಿರುಗಾಳಿಯಿಂದ ಭಂಗವಾಯಿತು. ಯೋನನನ್ನು ದೇವರು ಮೀನಿನ ಮುಖಾಂತರ ರಕ್ಷಿಸುದುದಕ್ಕೆ ಅವನು ಜಲಸಮಾಧಿಯಿಂದ ರಕ್ಷಿಸಲ್ಪಟ್ಟನು.

ಯೋನನು ಸತತ ಮೂರುದಿನಗಳು ಮೀನಿನ ಹೊಟ್ಟೆಯಲ್ಲಿ ನಿರ್ಬಂಧಿತವಾಗಿ ವಿಶ್ರಾಂತಿ ಪಡೆದುಕೊಂಡಾಗ ದೇವರ ಮೇಲೆ ತನ್ನ ಜೀವವು ಆಧಾರಗೊಂಡಿದೆ ಎಂಬುದನ್ನು ಮನಗಂಡನು. ಕೆಲವು ಸಲ ನಾವು ಈ ಲೋಕದಲ್ಲಿ ಯಾವದರಿಂದಲೂ ಸಹಾಯ ಸಿಗದ ಸ್ಥಳಕ್ಕೆ ಒಯ್ಯಲ್ಪಡುವುದರಿಂದ ಯೇಸುಕ್ರಿಸ್ತನನ್ನು ಬಿಟ್ಟು ಬೇರೆ ಯಾರ ಅಗತ್ಯವೂ ಇಲ್ಲ ಎಂಬುದನ್ನು ಮನಗಾಣಿಸುತ್ತದೆ.

ಯೋನನು ಮೀನಿನ ಹೊಟ್ಟೆಯಲ್ಲಿ ಮಾಡಿದ ಪ್ರಾರ್ಥನೆಯನ್ನು ಓದಿರಿ (ಯೋನ 2:1–9 ವಚನಗಳನ್ನು ಓದಿರಿ). ಆತನು ಯಾವುದರ ಬಗ್ಗೆ ಪ್ರಾರ್ಥಿಸಿದನು?

ಆತನು ಸಮುದ್ರ ನೀರಿನ ಆಳದಲ್ಲಿ ಬಹಳ ಅಪಾಯಕರವಾದ ಪರಿಸ್ಥಿತಿಯಲ್ಲಿದ್ದನು. ಯೋನನು ದೇವದರ್ಶನ ಗುಡಾರದ ಬಗ್ಗೆ ಪ್ರಾರ್ಥಿಸಿದನು. ನಿನ್ನ ಪರಿಶುದ್ಧಾಲಯವನ್ನು ದರ್ಶನ ಮಾಡುವೆನು ಎಂದು ಹೇಳುತ್ತಾನೆ. ಇಲ್ಲಿ ಏನು ನಡೆಯುತ್ತಿದೆ?

ಪರಿಶುದ್ಧಾಲಯವು ಆತನ ಕೇಂದ್ರಬಿಂದುವಾಗಿದೆ, ಅದು ಸಾಮಾನ್ಯವಾಗಿ ಪ್ರಾರ್ಥನೆಯ ಮುಖ್ಯವಾದ ಅಂಶವಾಗಿರುತ್ತದೆ. ಹಳೆಯ ಒಡಂಬಡಿಕೆಯಲ್ಲಿ ಪ್ರಾಥಮಿಕವಾಗಿ ಒಂದು ಸ್ಥಳದಲ್ಲಿ ಮಾತ್ರ ದೇವರ ಇರುವಿಕೆಯನ್ನು ನೋಡುತ್ತೇವೆ. ಆತನು ತನ್ನ ಪವಿತ್ರಾಲಯದಲ್ಲಿ ಇರುತ್ತಾನೆ (ವಿ.ಕಾಂಡ 15:17 ಮತ್ತು ವಿ.ಕಾಂಡ 25:8). ದೇವದರ್ಶನ ಗುಡಾರವು ಪ್ರಾರ್ಥನೆ ಮಾಡುವ ಮತ್ತು ದೇವರೊಂದಿಗೆ ಸಂವಾದಿಸುವ ಕೇಂದ್ರಬಿಂದುವಾಗಿರುತ್ತದೆ.

ಆದಾಗ್ಯೂ ಯೋನನು ಯೆರೂಸಲೇಮಿನ ದೇವಾಲಯವನ್ನು ಉಲ್ಲೇಖಿಸುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಆತನು ಪರಲೋಕದ ಪರಿಶುದ್ಧಾಲಯವನ್ನು ಕುರಿತು ಹೇಳುತ್ತಾನೆ (ಯೋನ 2:7). ಅಲ್ಲಿ ತಾನೆ ಅವನ ನಿರೀಕ್ಷೆ ಹುಟ್ಟಿಕೊಂಡಿತು. ಯಾಕೆಂದರೆ ದೇವರು ಕೊಡುವ ರಕ್ಷಣೆಯು ಅಲ್ಲಿಂದಲೇ ಬರುತ್ತದೆ.

ಯೋನನು ಅಂತಿಮವಾಗಿ ಈ ಸತ್ಯವನ್ನು ಅರ್ಥಮಾಡಿಕೊಂಡನು. ಆತನು ದೇವರ ಕೃಪೆಯನ್ನು ಅನುಭವಿಸಿದನು. ಆತನು ರಕ್ಷಿಸಲ್ಪಟ್ಟನು. ದೇವರ ಕರೆಗೆ ಬೆನ್ನುಕೊಟ್ಟು ಓಡುತ್ತಿದ್ದ ಪ್ರವಾದಿಯು ಮೀನಿನ ಬಾಯಿಂದ ಒಣನೆಲಕ್ಕೆ ಬಿದ್ದನು ಆವಾಗ ಅವನ ಮೇಲೆ ದೇವರಿಗಿದ್ದ ಪ್ರೀತಿಯನ್ನು ನೇರವಾಗಿ ಅರಿತುಕೊಂಡನು. ಯಾವುದೇ ವಿಶ್ವಾಸಿಗೆ ದೇವರ ಚಿತ್ತದ ಪ್ರಕಾರ ಇರಬಯಸುವುದೇ ಸುರಕ್ಷಿತ ಎಂಬುದನ್ನು ದಿಟವಾಗಿ ಅರಿತುಕೊಂಡನು.

ಆದುದರಿಂದ ಆತನು ತನ್ನ ಕರ್ತವ್ಯವನ್ನು ಮಾಡಲು ನಿರ್ಧಾರ ತೊಟ್ಟನು, ದೇವರ ಆಜ್ಞೆಗೆ ವಿಧೇಯನಾದನು. ಕಡೆಯದಾಗಿ ಅವನು ನಿನವೆ ಪಟ್ಟಣದ ಕಡೆಗೆ ಹೊರಟನು. ಅವನ ನಂಬಿಕೆಗೆ ಸಂದೇಹವೇ ಇಲ್ಲ, ಬಹಳ ದುಷ್ಟತನದಿಂದ ತುಂಬಿದ್ದ ಪಟ್ಟಣದ ಕಡೆಗೆ ಹೋಗುತ್ತಿರುವಾಗ ಜನರಿಗೆ ಅವರ ಕೆಟ್ಟತನದ ಬಗ್ಗೆ ಹೇಳುವಾಗ ಈ ಅನ್ಯದೇಶದ ಪ್ರವಾದಿಯನ್ನು ಇಷ್ಟ ಪಡದೆ ಹೋಗಬಹುದು.

ಕೆಲವು ಸಲ ನಾವು ವಿಷಯಗಳ ಮೇಲೆ ನೂತನ ದೃಷ್ಟಿ ಪಡೆದುಕೊಳ್ಳುವಂತೆ ಒಂದರಿಂದ ದೂರ ಹೋಗುವ ಅಗತ್ಯ ಉಂಟಾಗಬಹುದು. ಆದಾಗ್ಯೂ ಅದ್ಭುತಕರವಾಗಿ ಮೀನಿನ ಹೊಟ್ಟೆಯಲ್ಲಿ ಬದುಕುಳಿದ ಯೋನನ ಕಥೆಯು ಬಹಳ ಅತಿಶಯವಾದುದು. ಹಾಗೆಯೇ ನೀವು ಸಾಮಾನ್ಯವಾದ ಪರಿಸರ (ಪರಿಸ್ಥಿತಿ)

ತೊರೆದು ಹೊರಬಂದಾಗ, ನಿಮ್ಮನ್ನು ನೀವು ಹೊಸ ದೃಷ್ಟಿಯಲ್ಲಿ ನೋಡುವುದಕ್ಕೆ ಹೇಗೆ ಅನುವು ಮಾಡಿಕೊಡುತ್ತೀರಿ?

**ಮಂಗಳವಾರ** **ಸೆಪ್ಟೆಂಬರ್ 14**

## ಕಾರ್ಯ ನೆರವೇರಿತು

ಇಸ್ರಾಯೇಲಿನ ಯಾವ ಪಟ್ಟಣಕ್ಕೂ ಊರಿಗೂ ಹೋಲಿಸಿಕೊಂಡರೆ ನಿನವೆಯು ಒಂದು ದೊಡ್ಡ ಪಟ್ಟಣವಾಗಿತ್ತು. ಅದು ಬಹಳ ದೊಡ್ಡದಾಗಿತ್ತು, ಸುಮಾರು ಮೂರು ದಿನಗಳ ಪ್ರಯಾಣದಷ್ಟು ವಿಸ್ತಾರವಾಗಿತ್ತು (ಯೋನ 3:3). ಯೋನ 3:1–10 ವಚನಗಳನ್ನು ಓದಿರಿ. ಈ ದುಷ್ಟಪಟ್ಟಣವು ಹೇಗೆ ಪ್ರತಿಸ್ಪಂದಿಸಿತು? ನಾವು ಇತರರಿಗೆ ಸಾಕ್ಷಿಯಾಗಿರುವುದಕ್ಕೆ ಪ್ರಯತ್ನ ಪಡುವಾಗ ಈ ಕಥೆಯಿಂದ ಯಾವ ಪಾಠಗಳನ್ನು ತೆಗೆದುಕೊಳ್ಳಬಹುದು?

ಪಟ್ಟಣವನ್ನು ಕಾಲನಡಿಗೆಯಿಂದ ಸುತ್ತುತ್ತಾ ಯೋನನು ನಾಲ್ವತ್ತು ದಿನಗಳಾದ ಮೇಲೆ ನಿನೆವೆಯು ಕೆಡಲ್ಪಡುವುದು! ಎಂದು ಸಾರತೊಡಗಿದನು (ಯೋನ 3:4). ಸಂದೇಶವು ಅಕ್ಷರಶಃ ಖಚಿತವಾಗಿತ್ತು. ವಿವರಗಳು ಕೊಟ್ಟಿಲ್ಲದಿದ್ದರೂ ಸಂದೇಶವು ಅಂಗೀಕಾರ ಮಾಡುವ ಕಿವಿಗಳಿಗೆ ಬಿದ್ದಿತು ಎಂಬುದು ಸ್ಪಷ್ಟವಾಗುತ್ತದೆ, ನಿನೆವೆ ಪಟ್ಟಣದ ಜನರು ಯೋನನು ಎಚ್ಚರಿಕೆಯ ಮಾತುಗಳನ್ನು ಸಾಮೂಹಿಕವಾಗಿ ನಂಬಿದರು, ಪೂರ್ವದೇಶಗಳ ರೀತಿಯಂತೆ ನಿನವೆಯ ಅರಸನು ತಮ್ಮ ಹೃದಯಗಳನ್ನು ಬದಲು ಮಾಡಿಕೊಳ್ಳುವಂತೆ ತನ್ನ ಪ್ರಜೆಗಳಿಗೆ ಒಂದು ಆದೇಶವನ್ನು ಹೊರಡಿಸಿದನು. ದೊಡ್ಡವರು ಮೊದಲುಗೊಂಡು ಚಿಕ್ಕವರ ತನಕ ಎಲ್ಲರೂ ಮತ್ತು ಎಲ್ಲಾ ಪ್ರಾಣಿಗಳು ಉಪವಾಸ ಮಾಡಿ ದುಃಖವನ್ನು ಪ್ರಕಟಿಸಬೇಕಿತ್ತು. ಅರಸನೂ ಸಹ ಸಿಂಹಾಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆದುಬಿಟ್ಟು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕುಳಿತನು. ಇದು ತಾನೆ ಪಶ್ಚಾತ್ತಾಪ ಪಡುವ ಒಂದು ಮುಖ್ಯವಾದ ಸಾಂಕೇತಿಕ ಕ್ರಿಯೆ.

ಯೋನ 3:6–9 ವಚನಗಳನ್ನು ಓದಿರಿ. ಇದನ್ನು ಯೆರೆಮಿಯ 25:5; ಯೆಹೆಜ್ಕೇಲನು 14:6 ಮತ್ತು ಪ್ರಕಟಣೆಗಳು 2:5 ವಚನಗಳ ಜೊತೆಗೆ ಹೋಲಿಸಿರಿ. ನಿನ್ವೆಯ ಅರಸನಿಗೆ ನಿಜವಾದ ಪಶ್ಚಾತ್ತಾಪದ ಬಗ್ಗೆ ಅವನಿಗೆ ತಿಳುವಳಿಕೆ ಇತ್ತು ಎಂಬುದನ್ನು ತೋರಿಸುವ ಅವನ ಮಾತುಗಳಲ್ಲಿ ಯಾವ ಅಂಶಗಳಿದ್ದವು?

ಆತನು ಕೊಟ್ಟ ಸಂದೇಶವು ಸಂಕ್ಷಿಪ್ತವಾಗಿತ್ತು, ನೇರವಾಗಿ ವಿಷಯವನ್ನು ಒಳಗೊಂಡಿತ್ತು. ನಿಜವಾದ ಪಶ್ಚಾತ್ತಾಪದ ಬಗ್ಗೆ ಸರಿಯಾದ ದೈವಶಾಸ್ತ್ರವು ತುಂಬಿತ್ತು. ಯೋನನು ಅವರಿಗೆ ಉಪದೇಶ ಮಾಡುತ್ತಿರುವಾಗ ಪರಿಶುದ್ಧಾತ್ಮನು ನಿನೆವೆ ಜನರ ಹೃದಯಗಳಲ್ಲಿ ಬಲವಾಗಿ ಕೆಲಸ ಮಾಡುತ್ತಿದ್ದನು. ದೇವರು ಇಸ್ರಾಯೇಲ್ಯರನ್ನು ಎಷ್ಟು ಜೋಪಾನವಾಗಿ ನಡೆಸಿದನು ಎಂಬುದನ್ನು ಕುರಿತು ಕಥೆಗಳು ನಿನೆವೆಯವರಿಗೆ ಯಾವ ಪ್ರಯೋಜನವನ್ನು ಕೊಡದಿದ್ದರು ಅವರು ಸಕಾರಾತ್ಮಕವಾಗಿ ಸುವಾರ್ತೆಗೆ ಸ್ಪಂಧಿಸಿದರು. ಅವರೆಲ್ಲರೂ ಸೇರಿ ಬನ್ನಿ ನಮ್ಮನ್ನು ನಾವು ದೇವರ ಕರುಣೆಗೆ ಒಪ್ಪಿಸಿಕೊಡೋಣ, ನಮ್ಮ ಸ್ವಂತ ಸಿದ್ಧಿಗಳನ್ನು ಬಿಟ್ಟು ಬಿಡೋಣ! ನಾವೆಲ್ಲರೂ ಸಂಪೂರ್ಣವಾಗಿ ಆತನ ಉತ್ತಮತ್ವ ಮತ್ತು ಕೃಪೆಯ ಮೇಲೆ ಆತುಕೊಳ್ಳೋಣ ಎಂದು ಹೇಳುವರಾದರು.

ಆಶ್ಚರ್ಯಕರವಾದದ್ದೆನೆಂದರೆ, ದೇವರ ಕೃಪೆಯನ್ನು ಸ್ವತಃ ತಾನೇ ವೈಯಕ್ತಿಕವಾಗಿ ಅನುಭವಿಸಿದ ಯೋನನು ದೇವರ ಕೃಪೆಯು ಪ್ರತ್ಯೇಕವಾಗಿ ಕೆಲವರಿಗೆ ಮಾತ್ರ ಸಿಗುವಂಥದ್ದೆಂದು ಕೆಲವರಿಗೆ ಮಾತ್ರ ಆತನ ವಿಶ್ರಾಂತಿ ಪಡೆಯುವ ಅವಕಾಶ ಸಿಗುತ್ತದೆ ಎಂದು ತಿಳಿದುಕೊಂಡ ಹಾಗೆ ಕಾಣುತ್ತದೆ.

ಕ್ರೈಸ್ತೀಯ ಜೀವಿತದಲ್ಲಿ ಪಶ್ಚಾತ್ತಾಪವು ನಿರ್ಣಾಯಕವಾದ ಭಾಗವಾಗಿದೆ ಏಕೆ? ನಮ್ಮ ಪಾಪಗಳಿಗೆ ಅದರಲ್ಲೂ ಆಗಾಗ್ಗೆ ಎಸಗುವ ಪಾಪಗಳಿಗೆ ನಿಜವಾಗಿ ಪಶ್ಚಾತ್ತಾಪ ಪಡುವುದೆಂದರೆ ಏನು ಅರ್ಥ?

**ಬುಧವಾರ** **ಸೆಪ್ಟೆಂಬರ್ 15**

## ಕೋಪವು ಅಸಮಾಧಾನವುಳ್ಳ ಸುವಾರ್ತಾ ಸೇವಕ

ವಿಶಾದಕರವಾದದ್ದೇನೆಂದರೆ ಯೋನನ ಕಥೆಯು ಮೂರನೇ ಅಧ್ಯಾಯಕ್ಕೆ ಮುಕ್ತಾಯವಾಗುವುದಿಲ್ಲ.

ಯೋನ 4:1–11ನೇ ವಚನಗಳನ್ನು ಓದಿರಿ. ಯೋನನ ಸಮಸ್ಯೆ ಏನು? ಅವನ ತಪ್ಪು ಗುಣಸ್ವಭಾವದಿಂದ ನಾವು ಯಾವ ಪಾಠವನ್ನು ಕಲೆಯಬಹುದು? ಯೋನ 4ನೇ ಅಧ್ಯಾಯವು ಅವನು ದೇವರ ಮೇಲೆ ಕೋಪಪಡುವುದರೊಂದಿಗೆ ಆರಂಭವಾಗುತ್ತದೆ. ಯಾಕೆಂದರೆ ಅವನ ಸುವಾರ್ತಾ ಸೇವೆಯು ಯಶಸ್ಸು ಕಾಣುತ್ತದೆ.

ಯೋನನು ತಾನು ಎಲ್ಲರಿಗೂ ಮೂರ್ಖನಾಗಿ ಕಾಣಿಸುತ್ತೇನೆ ಎಂಬುದಾಗಿ ಚಿಂತೆ ಮಾಡುತ್ತಾನೆ. ದೇವರು ಆತನ ಪ್ರವಾದಿಯ ಜೊತೆ ಮಾತಾಡುವುದಕ್ಕೆ ಮತ್ತು ವಾದಿಸುವುದಕ್ಕೆ ಸಮಯ ತೆಗೆದುಕೊಳ್ಳುವುದನ್ನು ನೋಡುತ್ತೇವೆ, ಯೋನನಾದರೋ ಉದ್ವೇಗಕ್ಕೊಳಗಾದ ಚಿಕ್ಕ ಮಗುವಿನಂತೆ ವರ್ತಿಸುತ್ತಾನೆ.

ದೇವರನ್ನು ನಿಜವಾಗಿ ಅನುಸರಿಸುವ ಜನರಲ್ಲಿಯೂ ಮಾತ್ರವಲ್ಲದೆ ಪ್ರವಾದಿಗಳಲ್ಲಿಯೂ ಇನ್ನೂ ಬೆಳವಣಿಗೆ ಇಲ್ಲದ ಮತ್ತು ತಮ್ಮನ್ನು ತಾವು ಗೆಲ್ಲಲಾರದ ಸ್ವಭಾವದಲ್ಲಿರುತ್ತಾರೆ ಎಂಬುದಕ್ಕೆ ಯೋನನ ನಡವಳಿಕೆ ಪುರಾವೆ ನೀಡುತ್ತದೆ.

"ನಿನವೆ ಪಟ್ಟಣದ ಜನರು ಗೋಣಿತಟ್ಟನ್ನು ಉಟ್ಟುಕೊಂಡು, ಬೂದಿಯಲ್ಲಿ ಕೂತುಕೊಂಡು ಪಶ್ಚಾತ್ತಾಪ ಪಡಲಾಗಿ ದೇವರು ಅವರನ್ನು ನಾಶಮಾಡದೆ ಉಳಿಸುತ್ತಿದ್ದಾನೆ ಎಂದು ಅರಿತ ಯೋನನು ದೇವರ ಕೃಪೆಗೋಸ್ಕರ ಸಂತೋಷ ಪಡುವವರಲ್ಲಿ ಮೊದಲಿಗನಾಗಬೇಕಿತ್ತು. ಆದರೆ ನಿನವೆ ಪಟ್ಟಣ ನಾಶವಾಗದೆ ಹೋದರೆ ತಾನು ಸುಳ್ಳು ಪ್ರವಾದಿಯಾಗಿ ಕಾಣಿಸುತ್ತೇನೆ ಎಂಬುದಾಗಿ ಚಿಂತೆ ಮಾಡತೊಡಗಿದನು. ತನ್ನ ಜನಪ್ರಿಯತೆ ಬಗ್ಗೆ ಅಸೂಯೆಯುಳ್ಳವನಾಗಿ ಆ ದುಷ್ಟ ಪಟ್ಟಣದ ಆತ್ಮಗಳ ಅಪರಿಮಿತವಾದ ಬೆಲೆಯನ್ನು ತಿಳಿಯುವಲ್ಲಿ ತನ್ನ ದೃಷ್ಟಿ ಕಳೆದುಕೊಂಡನು" ಶ್ರೀಮತಿ ವೈಟಮ್ಮನವರ ಪ್ರವಾದಿಗಳು ಮತ್ತು ಅರಸರು ಎಂಬ ಪುಸ್ತಕದಲ್ಲಿ 271ನೇ ಪುಟ.

ದೇವರು ತನ್ನ ಪ್ರವಾದಿಯೊಂದಿಗೆ ತೋರಿಸಿದ ತಾಳ್ಮೆಯು ಆಶ್ಚರ್ಯಕರವಾದು–ದಾಗಿದೆ. ದೇವರು ಯೋನನನ್ನು ಉಪಯೋಗಿಸುವ ಉದ್ದೇಶ ಹೊಂದಿದ್ದನು. ಯೋನನು ಓಡಿಹೋಗುವಾಗ ದೇವರು ಬಿರುಗಾಳಿಯನ್ನು ಎಬ್ಬಿಸಿ ಮೀನಿನ ಮೂಲಕ ಅವನನ್ನು ಹಿಂದಕ್ಕೆ ತರುತ್ತಾನೆ. ಈವಾಗ ಮತ್ತೆ ಯೋನನು ದೇವರಿಗೆ ವಿರುದ್ಧವಾಗಿ ವರ್ತಿಸುವಾಗ ದೇವರು ಅವನ ಜೊತೆ ವಾದಮಾಡಿ ಅವನ ಕೆಟ್ಟ ಮನೋಭಾವಕ್ಕೆ "ನೀನು ಸಿಟ್ಟುಗೊಳ್ಳುವುದು ಸರಿಯೋ" (ಯೋನ 4:4) ಎಂದು ಕೇಳುತ್ತಾನೆ.

ಲೂಕ 9:51–56ನೇ ವಚನಗಳನ್ನು ಓದಿರಿ. ಈ ಪ್ರಸಂಗವು ಒಂದು ರೀತಿಯಲ್ಲಿ ಯೋನನ ಕಥೆಯಲ್ಲಿ ನಡೆದುದಕ್ಕೆ ಹೋಲಿಸಬಹುದು ಹೇಗೆ?

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು". ಯೋಹಾನ 3:16 ಅಥವಾ ಯೋನ 4:11ರಲ್ಲಿ ದೇವರು ಹೀಗೆ ಹೇಳುತ್ತಾನೆ. "ಇಂಥ ಗಿಡಕ್ಕಾಗಿ ನೀನು ಕನಿಕರಪಟ್ಟಿರುವಲ್ಲಿ ಎಡಗೈ ಬಲಗೈ ತಿಳಿಯದ ಒಂದು ಲಕ್ಷ ಇಪ್ಪತ್ತು ಸಾವಿರ ನರಪ್ರಾಣಿಗಳು ಬಹು ಪಶುಗಳೂ ಉಳ್ಳ ಆ ದೊಡ್ಡ ಪಟ್ಟಣವಾದ ನಿನೆವೆಗಾಗಿ ನಾನು ಕನಿಕರ ಪಡಬಾರದೋ ಅಂದನು". ಕಡೆದಾಗಿ ನಾವು ದೇವರಿಗೆ ಎಷ್ಟು ಕೃತಜ್ಞರಾಗಿರಬೇಕು, ನಾವುಗಳೆಲ್ಲ ದೇವರೇ ನಮ್ಮ ಹೃದಯಗಳನ್ನು, ಮನಸ್ಸನ್ನು, ಉಪದೇಶವನ್ನು ನಿಷ್ಕರ್ಷೆ ಮಾಡುವ ಮಹಾನ್ಯಾಯಾಧಿಪತಿಯಾಗಿದ್ದಾನೆ.

ನಾವು ದೇವರು ಇತರರಿಗೆ ತೋರುವಂಥ ಕನಿಕರ ಮತ್ತು ಸಹನೆಗಳನ್ನು ಹೊಂದಿಕೊಳ್ಳುವುದನ್ನು ಹೇಗೆ ಕಲಿಯಬಹುದು? ಅಥವಾ ಆತನಲ್ಲಿದ್ದ ಕರುಣೆ ಮತ್ತು ಸಹನೆಯನ್ನು ಪ್ರತಿಬಿಂಬಿಸುವುದಕ್ಕೆ ಹೇಗೆ ಕಲಿಯಬಹುದು?

**ಗುರುವಾರ** **ಸೆಪ್ಟೆಂಬರ್ 16**

## ಒಂದು ದ್ವಿಮುಖ ರಸ್ತೆ

ಯೋನನು ತನ್ನ ಶಕ್ತಿಗೆ ಮೀರಿದ ತಳಮಳಕ್ಕೆ ಗುರಿಯಾದನೆಂದು ಕಾಣಿಸುತ್ತದೆ. ನಿನೆವೆ ಪಟ್ಟಣವು ಅಪಾಯಕಾರಿಯಾಗಿದ್ದಾಗ್ಯೂ ಯೋನನ ಪ್ರಸಂಗದಲ್ಲಿ (ಕಥೆಯಲ್ಲಿ) ನಿನೆವೆಯವರು ಸಮಸ್ಯೆಯಾದಂತೆ ಕಾಣುವುದಿಲ್ಲ. ಅವರು ಎಚ್ಚರಿಕೆಯ ಸಂದೇಶವನ್ನು ಕೇಳಿ ಬಹಳ ಬೇಗನೆ ಪಶ್ಚಾತ್ತಾಪ ಪಟ್ಟರು. ಈ ಒಂದು ಸುವಾರ್ತಾ ಸೇವೆಯ ಕಥೆಯಲ್ಲಿ ಯೋನನೇ ದುರ್ಬಲನಂತೆ (ದುರ್ಬಲವಾದ ಕೊಂಡಿಯಂತೆ) ಕಾಣುತ್ತಾನೆ.

ಈ ಕಥೆಯಲ್ಲಿ ದೇವರು ಮೊಂಡು ಪ್ರವಾದಿಯನ್ನು ಒಲಿಸಿಕೊಳ್ಳುತ್ತಾನೆ. ಯಾಕೆಂದರೆ ಪ್ರವಾದಿಯಾದ ಯೋನನಿಗೆ ಒಂದು ಸುವಾರ್ತೆಸೇವಾ ಪ್ರವಾಸ ಅಗತ್ಯವಿತ್ತು, ನಿನೆವೆಯವರಿಗೆ ಸುವಾರ್ತೆ ಸಂದೇಶವು ಎಷ್ಟು ಅಗತ್ಯವಾಗಿತ್ತೋ ಅಷ್ಟೇ ಯೋನನಿಗೂ ಅಗತ್ಯವಾಗಿತ್ತು. ಯೂದನ ಪತ್ರಿಕೆಯನ್ನು ಓದಿರಿ. ನಾವು ನಮ್ಮನ್ನು ದೇವರ ಪ್ರೀತಿಯಲ್ಲಿ ಇಟ್ಟುಕೊಳ್ಳುವುದು ಹೇಗೆ (ಯೂದ 21) ಮತ್ತು ಇದರ ಅರ್ಥವೇನು?

ಹೊಸ ಒಡಂಬಡಿಕೆಯಲ್ಲಿ ಈ ಒಂದು ಸಣ್ಣ ಪತ್ರಿಕೆಯಲ್ಲಿ ಯೂದನು 21ನೇ ವಚನದಲ್ಲಿ "ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರು ನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ" ಎಂದು ಹೇಳುತ್ತಾನೆ.

ಒಬ್ಬನು ವೈಯಕ್ತಿಕವಾಗಿ ದೇವರ ಪ್ರೀತಿ ಮತ್ತು ಕೃಪೆಯನ್ನು ಅನುಭವಿಸುವುದು ಜೀವಿತದಲ್ಲಿ ಒಮ್ಮೆ ಮಾತ್ರ ನಡೆಯುವ ಘಟನೆಯಲ್ಲ. ದೇವರ ಪ್ರೀತಿಯಲ್ಲಿ ನಮ್ಮನ್ನು ನಾವು ಕಾಪಾಡಿಕೊಳ್ಳುವ ಒಂದು ಖಾತ್ರಿಯುಳ್ಳ ವಿಧಾನ ಯಾವುದೆಂದರೆ ನಾವು ಇತರರಿಗೆ ಸುವಾರ್ತೆ ಸಾರುವುದೇ ಆಗಿದೆ. ಮುಂದಿನ ವಚನದಲ್ಲಿ ಯೂದನು "ಸಂದೇಹ ಪಡುವ ಕೆಲವರಿಗೆ ಕರುಣೆ ತೋರಿಸಿರಿ; ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ" ಎಂದು ಹೇಳುತ್ತಾನೆ.

ಯೂದ 20 ರಿಂದ 23 ವಚನಗಳನ್ನು ಓದಿರಿ. ಇಲ್ಲಿ ಯಾವುದು ಯೋನನ ಕಥೆಗೆ ಸಂಬಂಧ ಪಡುತ್ತದೆ ಮತ್ತು ಇದು ನಮಗೆ ಏನು ಹೇಳುತ್ತದೆ?

ದೇವರು ಯೋನನನ್ನು ನಿನೆವೆಗೆ ಹೋಗಲು ಕರೆ ನೀಡಿದನು. ಯಾಕೆಂದರೆ ಈ ಕರೆಗೆ ಮೊದಲು ಯೋನನು ಬಹುಶಃ ಅಶ್ಶೂರರ ಜೊತೆ ಅವನ ಸಂಬಂಧವೇನು ಎಂಬುದರ ಬಗ್ಗೆ ಹೆಚ್ಚುಕಾಲ ಚಿಂತಿಸಿರುವುದಿಲ್ಲ. ಬಹುಶಃ ಅಶ್ಶೂರರನ್ನು ತಾನು ಇಷ್ಟಪಡುವುದಿಲ್ಲವೆಂದು ಅವನಿಗೆ ಗೊತ್ತಿತ್ತು, ಆದರೆ ಆತನು ಅವರನ್ನು ಎಷ್ಟು ದ್ವೇಷಿಸುತ್ತೇನೆಂದು ಅಥವಾ ದೇವರಿಂದ ಕರೆ ಬಂದ ಮೇಲೂ ಅವರನ್ನು ತಪ್ಪಿಸಿಕೊಳ್ಳಲು ಇಂಥಾ ಮಟ್ಟಕ್ಕೆ ಹೋಗುತ್ತಾನೆಂಬುದು ಗೊತ್ತಿರಲಿಲ್ಲ. ಯೋನನಿಗೆ ನಿನೆವೆಯವರು ಎಂದಿಗೂ ಪರಲೋಕದಲ್ಲಿ ತನ್ನ ನೆರೆಯವರಾಗಿರುವುದು ಇಷ್ಟವಿರಲಿಲ್ಲ. ದೇವರು ಪ್ರೀತಿಸುವ ರೀತಿಯಲ್ಲಿ ಯೋನನು ಪ್ರೀತಿಸುವುದನ್ನು ಕಲಿತಿರಲಿಲ್ಲ. ದೇವರು ಯೋನನನ್ನು ನಿನೆವೆಗೆ ಹೋಗಲು ಕರೆದನು. ಯಾಕೆಂದರೆ ಆತನು (ದೇವರು) ನಿನೆವೆ ಜನರನ್ನು ಪ್ರೀತಿಸುವವನಾಗಿದ್ದನು ಮತ್ತು ಅವರು ಸಹಾ ತನ್ನ ರಾಜ್ಯದಲ್ಲಿರಬೇಕೆಂದು ಬಯಸಿದನು. ಆದರೆ ದೇವರು ಯೋನನನ್ನು ಸಹಾ ಕರೆದನು. ಯಾಕೆಂದರೆ ಆತನು ಯೋನನನ್ನೂ ಪ್ರೀತಿಸುವವನಾಗಿದ್ದನು. ದೇವರಿಗೆ ಯೋನನು ಬೆಳೆದು ತನ್ನ ಜೊತೆ ಕೆಲಸ ಮಾಡುವಾಗ ತನ್ನ ಸ್ವರೂಪವು ಆತನಲ್ಲಿ ಕಾಣಬೇಕೆಂದು ಬಯಸಿದನು. ಯೋನನಿಗೆ ನಿಜವಾದ ವಿಶ್ರಾಂತಿಯು

ದೇವರೊಂದಿಗೆ ಇಟ್ಟುಕೊಳ್ಳುವ ರಕ್ಷಣೆಯ ಸಂಬಂಧದ ಸಲುವಾಗಿ ಆತನ ಚಿತ್ತದಂತೆ ನಡೆಯುವುದರಿಂದ ಸಿಗುತ್ತಿತ್ತು. ಅದಕ್ಕಾಗಿ ನಾವು ಇತರರನ್ನು ತಲುಪಿ ಅವರನ್ನು ನಮ್ಮಲ್ಲಿರುವ ನಂಬಿಕೆ ಮತ್ತು ನಿರೀಕ್ಷೆಗೆ ನಡೆಸಬೇಕು.

ಇತರರ ರಕ್ಷಣೆಗಾಗಿ ಕೆಲಸ ಮಾಡಲು ನೀವು ಎಷ್ಟು ಸಮಯವನ್ನು ಕಳೆಯುವವರಾಗಿದ್ದೀರಿ? ಆಧ್ಯಾತ್ಮಿಕವಾದ ಅರ್ಥದಲ್ಲಿ ಇಂಥಾ ಕೆಲಸಗಳು ನಮ್ಮನ್ನು ಯೇಸುಕ್ರಿಸ್ತನಲ್ಲಿ ನಿಜವಾದ ವಿಶ್ರಾಂತಿಯನ್ನು ಕಂಡುಕೊಳ್ಳಲು ನಡೆಸುತ್ತವೆ ಹೇಗೆ?

**ಶುಕ್ರವಾರ** **ಸೆಪ್ಟೆಂಬರ್ 17**

**ಹೆಚ್ಚಿನ ಚಿಂತನೆ :** ಯೋನನಿಗೆ ರಕ್ಷಿಸುವ ಕೆಲಸವನ್ನು ವಹಿಸಿಕೊಡುವಾಗ ದೇವರು ಆತನಿಗೆ ದೊಡ್ಡ ಜವಾಬ್ದಾರಿಯನ್ನು ಕೊಟ್ಟನು. ಯಾವಾತನು ಯೋನನನ್ನು ಕರೆದನೋ ಆತನು ತನ್ನ ಸೇವಕನನ್ನು ಕಾಪಾಡಿ ಅವನಿಗೆ ಯಶಸ್ಸನ್ನು ನೀಡಲು ಶಕ್ತನಾಗಿದ್ದನು. ಪ್ರವಾದಿಯಾದ ಯೋನನು ದೇವರ ಮೇಲೆ ಸಂದೇಹ ಪಟ್ಟುಕೊಳ್ಳದೆ ವಿಧೇಯನಾಗಿ ನಡೆದುಕೊಂಡಿದ್ದರೆ, ಅನೇಕ ಕಹಿ ಅನುಭವಗಳನ್ನು ತಪ್ಪಿಸಿಕೊಳ್ಳ–ಬಹುದಾಗಿತ್ತು ಮತ್ತು ಹೇರಳವಾಗಿ ಆಶೀರ್ವದಿಸಲ್ಪಡುತ್ತಿದ್ದನು. ಆದಾಗ್ಯೂ ಆತನು ಹತಾಶನಾದ ಸಂದರ್ಭದಲ್ಲಿ ದೇವರು ಅವನನ್ನು ತೊರೆಯಲಿಲ್ಲ. ಒಂದರ ಮೇಲೊಂದು ಶೋಧನೆಗಳಿಂದ ಮತ್ತು ಅಪರಿಚಿತವೆನಿಸುವ ದೈವೀಕ ಉದ್ದೇಶಗಳ ಮೂಲಕ ದೇವರ ಅಪಾರವಾದ ಶಕ್ತಿಯ ಮೇಲೆ ಆತನ ವಿಶ್ವಾಸವು ಪುನರುಜ್ಜೀವನ–ಗೊಳ್ಳುವಂತೆ ಮಾಡಲ್ಪಟ್ಟಿತು"– ಶ್ರೀಮತಿ ಎಲೆನ್ ಜಿ ವೈಟಮ್ಮನವರ ಅರಸರು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ, 266ನೇ ಪುಟ.

"ಬಹಳ ಸರಳವಾದ ಮತ್ತು ತಗ್ಗಿನ ಸ್ವಭಾವದಿಂದ (ದೀನತೆಯಿಂದ) ಸಾವಿರಾರು ಜನರನ್ನು ತಲುಪಬಹುದಾಗಿದೆ. ಅತಿ ಬುದ್ಧಿ ಜೀವಿಗಳೆನಿಸಿಕೊಂಡವರು, ಪ್ರಪಂಚವು ಮಹಾಪ್ರತಿಭೆಯುಳ್ಳ ಪುರುಷರು ಮತ್ತು ಮಹಿಳೆಯರು ಎನಿಸಿಕೊಂಡವರು ಬಹಳ ಸಲ ದೇವರ ಪ್ರೀತಿಯುಳ್ಳ ಮನುಷ್ಯನು ಆಡುವ ಮಾತಿನಿಂದ ಪುನಶ್ಚೇತನಗೊಳ್ಳುತ್ತಾರೆ, ಯಾಕೆಂದರೆ ಆ ಮನುಷ್ಯನು ಆ ದಿವ್ಯಪ್ರೀತಿಯ ಬಗ್ಗೆ ಸಹಜವಾಗಿ ಪ್ರಾಪಂಚಿಕರು ಎಷ್ಟು ಸ್ವಾರಸ್ಯಕರವಾಗಿ ಹೇಳುತ್ತಾರೋ ಅಷ್ಟೇ ಆಳವಾಗಿ, ಸ್ವಾರಸ್ಯಕರವಾಗಿ ಮಾತಾಡುತ್ತಾನೆ". ಶ್ರೀಮತಿ ಎಲೆನ್ ಜಿ ವೈಟಮ್ಮನವರ ದಿ ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್, 232ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಜನರು ರಕ್ಷಣೆ ಪಡೆದುಕೊಳ್ಳುವಂತೆ ನೀನು ಅವರಿಗೆ ಸಾಕ್ಷಿಯಾಗಿರು ಎಂದು ದೇವರು ಕರೆದಾಗ 'ದೇವರ ಪ್ರವಾದಿ' ಎನಿಸಿಕೊಂಡನಿಗೆ ಯಾಕೆ ಬೇಸರವಾಗಬೇಕು? ಯೋನನಲ್ಲಿದ್ದ ಇದೇ ಮನೋಭಾವವನ್ನು ನಾವು ಹೇಗೆ ಅಥಮಾಡಿಕೊಳ್ಳಬಹುದು? ದೇವರು ತನ್ನ ಜನರು ತಮಗೆ ಕೊಟ್ಟ ಬೆಳಕಿನ ವಿರೋಧವಾಗಿ ನಡೆದುಕೊಂಡಾಗಲು ಅವರು ಪಶ್ಚಾತ್ತಾಪ ಪಟ್ಟು ರಕ್ಷಣೆ ಹೊಂದುವ ಹಾಗೆ ಮಾಡಿದುದು ದೇವರ ಸಹನೆಗೆ ಇದು ಎಂಥಾ ಬಲವಾದ ಉದಾಹರಣೆಯಲ್ಲವೆ?

2. ಯೋನನ ಕಥೆಯು ದೇವರು ಮಾರ್ಗ ತಪ್ಪಿದ ಜನರನ್ನು ಹುಡುಕಿ ರಕ್ಷಿಸುವುದು ಮಾತ್ರವಲ್ಲದೆ ತನ್ನ ಹಿಂಬಾಲಕರ ಹೃದಯವನ್ನು ಪರಿವರ್ತನೆ ಮಾಡುವ ಕೆಲಸದಲ್ಲಿ ಸಹಾ ತೊಡಗಿರುತ್ತಾನೆಂದು ಅರುಹುತ್ತದೆ. ನಾವು ಈಗಾಗಲೇ ದೇವರನ್ನು ಆತನ ಸತ್ಯವನ್ನೂ ಅರಿತವರಾಗಿದ್ದರೂ ಹೊಸ ಹೃದಯ ಮತ್ತು ಹೊಸ ಮನಸ್ಸನ್ನು (ಆತ್ಮವನ್ನು) ಹೊಂದಿಕೊಳ್ಳುವುದು ಹೇಗೆ? ಸತ್ಯವನ್ನು ತಿಳಿದಿರುವುದಕ್ಕೂ ಅದರಿಂದ ಮನಪರಿವರ್ತನೆ ಹೊಂದುವುದಕ್ಕೂ ಏನು ವ್ಯತ್ಯಾಸವಿದೆ?

3. ಯೂದನ ಪತ್ರಿಕೆಯನ್ನು ಪುನಃ ಓದಿರಿ. ಅದರಲ್ಲಿರುವ ಅವಶ್ಯಕವಾದ ಸಂದೇಶವೇನು, ಇಂದಿನ ಕಾಲಕ್ಕೆ ಸಭೆಯಾಗಿ ನಮಗೆ ಈ ಸಂದೇಶ ಅನ್ವಯವಾಗುತ್ತದೆ (ಸಂಗತವಾಗಿದೆ) ಏಕೆ?

4. ಇತರರ ರಕ್ಷಣೆಗೆ ಕೆಲಸ ಮಾಡುವಾಗ ಆಗುವ ಅನುಭವವು ನಮ್ಮ ಆತ್ಮೀಕ ಜೀವನಕ್ಕೆ ಸಾಕಷ್ಟು ಒಳ್ಳೆಯದನ್ನು ಮಾಡುತ್ತದೆ ಹೇಗೆ?

5. ಯೋನನು ನಿನೆವೆಗೆ ಹೋಗದಿರುವುದಕ್ಕೆ ಯಾವುದೇ ಕಾರಣವಿರಲಿ ಅಥವಾ ಆತನು ಹಾಗೆ ಅಂದುಕೊಂಡಿರಲಿ ದೇವರು ವಾಸ್ತವವಾಗಿ ಆತನು ಎಷ್ಟು ತಪ್ಪು ಮಾಡುತ್ತಿದ್ದಾನೆ ಎಂಬುದನ್ನು ಆತನಿಗೆ ತೋರಿಸಿಕೊಟ್ಟನು. ಇತರರಿಗೆ ಯೋನನು ಪ್ರದರ್ಶಿಸಿದ ಅದೇ ತೆರನಾದ ವರ್ತನೆಯನ್ನು ಪ್ರತಿಬಿಂಬಿಸುವ ಯಾವ ವರ್ತನೆ ನಮ್ಮಲ್ಲಿದೆ?